# ಪುಟ್ಟ ಗದಾಯ್ ಮತ್ತು ಭಕ್ತ ಚಿನು ಶಾಂಖಾರಿ

ಪ್ರವ್ರಾಜಿಕಾ
ಧರ್ಮಪ್ರಾಣಾ

ಶ್ರೀರಾಮಕೃಷ್ಣರ ಬಾಲ್ಯದ ಹೆಸರು ಗದಾಧರ. ಪುಟ್ಟ ಗದಾಧರ ಮನೆಯ ಎಲ್ಲರಿಗೂ, ಕಾಮಾರಪುಕುರ ಗ್ರಾಮಸ್ಥರಿಗೂ ಪ್ರೀತಿಯ 'ಗದಾಯ್' ಆಗಿದ್ದ. ಶ್ರೀರಾಮಕೃಷ್ಣರ ಬಾಲ್ಯದಲ್ಲಿಯೇ ಮುಗ್ಧ ಗ್ರಾಮಸ್ಥನೊಬ್ಬನು ಅವರ ಭಗವತ್ ಸ್ವರೂಪವನ್ನು ಅರಿತು ಪೂಜಿಸಿದ ಪ್ರಸಂಗವನ್ನು ನಿರೂಪಿಸಿರುವ ಪೂಜ್ಯ ಮಾತಾಜಿಯವರು ತ್ರಿಶೂರಿನ ಶ್ರೀಶಾರದಾ ಮಠದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ

ಶ್ರೀರಾಮಕೃಷ್ಣರು ಜೀವಿಸಿರುವಾಗಲೇ ಅವರ ದಿವ್ಯ ಜೀವನಚರಿತ್ರೆಯನ್ನು ಹಲವು ಭಕ್ತರು ಬರೆದು ಪ್ರಕಟಗೊಳಿಸಿದ್ದರು. ಆದರೆ ಅದು ಬಂಗಾಳದಲ್ಲಿ ಮಾತ್ರ ಹೆಚ್ಚಾಗಿ ಪ್ರಸಾರವಾಗಿತ್ತು. ಅವರ ಮಹಾಸಮಾಧಿಯ ನಂತರ ದೇಶದ ಎಲ್ಲಾ ಕಡೆಗಳಲ್ಲೂ, ಹೊರದೇಶಗಳಲ್ಲಿಯೂ ಅನೇಕರು, ಅನೇಕ ಭಾಷೆಗಳಲ್ಲಿ ಅವರ ಬಗೆಗೆ ಪುಸ್ತಕಗಳನ್ನು ಬರೆದು ಪ್ರಕಟಗೊಳಿಸಿದ್ದರು. ಶ್ರೀರಾಮಕೃಷ್ಣರ ಜೀವನ ಚರಿತಾಮೃತವನ್ನು ಪಡೆದು ಲೋಕವು ಸಮೃದ್ಧವಾಯಿತು. ಪರಮ ಶ್ರೇಷ್ಠನೂ, ಪರಮಭಕ್ತನೂ ಆದ ಶ್ರೀ ಶುಕಮುನಿಯು ಭಗವಂತನ ಎಲ್ಲ ಅವತಾರಗಳನ್ನು ವಿವರಿಸಿ ಬರೆದ ಭಾಗವತ ಪುರಾಣವು ಪುರಾಣಗಳಲ್ಲಿ ಅತಿ ಶ್ರೇಷ್ಠವಾಗಿದೆ. ಶ್ರೀರಾಮಕೃಷ್ಣರ ಜೀವನ ಚರಿತ್ರೆಯು ಅದಕ್ಕಿಂತಲೂ ಶ್ರೇಷ್ಠ ಎನ್ನಬಹುದು: ಏಕೆಂದರೆ ಸ್ವಾಮಿ ವಿವೇಕಾನಂದರು ಹೇಳಿದ್ದಾರೆ: "ವೇದವೇದಾಂತಗಳು ಈ ಪ್ರಪಂಚಕ್ಕೆ ಏನು ಸಾರಿದವೊ, ಎಲ್ಲಾ ಅವತಾರಗಳೂ ಈ ಭೂಮಿಯಲ್ಲಿ ಅವತರಿಸಿ ಯಾವ ಕಾರ್ಯವನ್ನು ನೆರವೇರಿಸಿರುವರೋ ಶ್ರೀರಾಮಕೃಷ್ಣರು ತಮ್ಮ ಈ ಒಂದು ಜೀವನದಲ್ಲೇ ಅವೆಲ್ಲವನ್ನು ಜಗತ್ತಿಗೆ ನೀಡಿದ್ದಾರೆ. ಅವರ ಜೀವನವನ್ನು ಅರ್ಥಮಾಡಿಕೊಳ್ಳದಿದ್ದರೆ ವೇದವೇದಾಂತಗಳು ಸರಿಯಾಗಿ ಅರ್ಥವಾಗುವುದಿಲ್ಲ. ಅವರು ಈ ಎಲ್ಲದರ ವ್ಯಾಖ್ಯಾನಸ್ವರೂಪವಾಗಿದ್ದರು. ಅವರ ಜೀವನ ಚರಿತ್ರೆ ಅತ್ಯಂತ ಅಮೂಲ್ಯವೂ ಪವಿತ್ರವೂ ಆಗಿದೆ."

ಶ್ರೀರಾಮಕೃಷ್ಣರ ಜೀವನವನ್ನು ವಿವರಿಸುವ ಗ್ರಂಥಗಳಲ್ಲಿ ಅವರ ಶಿಷ್ಯ ಅಕ್ಷಯಕುಮಾರ ಸೇನ್‌ರವರು ಬರೆದ "ಶ್ರೀರಾಮಕೃಷ್ಣ ಪೂಂಥಿ" ಎಂಬ ಬಂಗಾಳಿ ಭಾಷೆಯಲ್ಲಿರುವ ಸುಪ್ರಸಿದ್ಧ ಗ್ರಂಥವು (ಪೂಂಥಿ ಶೈಲಿಯು ಬಂಗಾಳಿ ಭಾಷಾ ಸಾಹಿತ್ಯದ ಒಂದು ಭಾಗ) ಬಂಗಾಳದ ಜನರ ಮೆಚ್ಚುಗೆಯನ್ನು ಪಡೆದಿರುವುದು. ಇದನ್ನು ಬರೆದ ಅಕ್ಷಯ ಕುಮಾರ ಸೇನ್ ಹೇಳಿದ್ದಾರೆ, ಶ್ರೀರಾಮಕೃಷ್ಣರ ಜೀವನ ಚರಿತ್ರೆ, ಗೀತಾಪುರಾಣಗಳನ್ನು ಮೀರಿಸಿದೆ. ಕೋಟಿ ಯಜ್ಞಗಳ, ಯಾಗಗಳ ಫಲವೂ, ಚತುರ್ಧಾಮಗಳ ಸಂದರ್ಶನದ ಫಲವೂ ಈ ಗ್ರಂಥವನ್ನು ಓದಿದರೆ ಲಭಿಸುವುದು.

ಪೂಂಥಿಯು ಪ್ರಥಮವಾಗಿ ಪ್ರಕಟವಾದಾಗ ಅದನ್ನು ಓದಿದ ಸ್ವಾಮಿ ವಿವೇಕಾನಂದರು, ಸ್ವಾಮಿ ರಾಮಕೃಷ್ಣಾನಂದರಿಗೆ ಬರೆದ ಒಂದು ಪತ್ರದಲ್ಲಿ ಈ ರೀತಿ ಬರೆದಿದ್ದರು, "ಶ್ರೀರಾಮಕೃಷ್ಣ ಪೂಂಥಿ ವಿಸ್ತೃತವಾದುದು, ಶ್ರೇಷ್ಠವಾದುದು. ಇದನ್ನು ಓದಿ ನಾನೆಷ್ಟು ಆನಂದವನ್ನು ಹೊಂದಿದ್ದೇನೆ! ಇದು ಎಲ್ಲಾ ಕಡೆ ಪ್ರಸಾರವಾಗಲಿ. ಹಳ್ಳಿಹಳ್ಳಿಗಳಲ್ಲಿ ಪ್ರಸಾರವಾಗಲಿ. ಶ್ರೀರಾಮಕೃಷ್ಣರನ್ನು ಎಲ್ಲರೂ ಅರಿಯಲಿ– ಎಲ್ಲ ವರ್ಗಗಳ, ಸ್ತ್ರೀಯರು, ಪುರುಷರು, ಎಲ್ಲರೂ ಇದನ್ನು ಪೂಜಿಸಲಿ." ಅಕ್ಷಯಕುಮಾರ್ ಸೇನ್‌ರನ್ನು ಸ್ವಾಮಿ ವಿವೇಕಾನಂದರು 'ಶಾಂಕ್‌ಚುನ್ನಿ' ಎಂದು ಸ್ನೇಹದಿಂದ ಕರೆಯುತ್ತಿದ್ದರು. ಪತ್ರದಲ್ಲಿ ಅವರನ್ನು ಹೊಗಳಿ ಈ ರೀತಿ ಬರೆದಿದ್ದರು: "ಶ್ರೀರಾಮಕೃಷ್ಣ ಪೂಂಥಿಯನ್ನು ಬರೆದು ಶಾಂಕ್‌ಚುನ್ನಿ ಧನ್ಯನಾದನು. ಅವನ ಕಂಠದಿಂದ ಶ್ರೀರಾಮಕೃಷ್ಣರು ಪುನಃ ಆವಿರ್ಭಾವಗೊಂಡಿದ್ದಾರೆ. ಶ್ರೀರಾಮಕೃಷ್ಣರ ಜೀವನವನ್ನು ಯಾವ ಲೋಪದೋಷವೂ ಇಲ್ಲದೆ ಸರಿಯಾಗಿ ಚಿತ್ರಿಸಿದ್ದಾನೆ. ನನ್ನ ಲಕ್ಷ ಲಕ್ಷ ಪ್ರೇಮಾಲಿಂಗನವನ್ನು ತಿಳಿಸು...." ಶ್ರೀಮಾತೆ ಶಾರದಾದೇವಿಯವರೂ ಪೂಂಥಿಯನ್ನು ಭಕ್ತರಿಂದ ಓದಿಸಿ ಕೇಳಿ ತಮ್ಮ ಆನಂದವನ್ನು, ತೃಪ್ತಿಯನ್ನು ವ್ಯಕ್ತಪಡಿಸಿದ್ದರು.

ಅಕ್ಷಯಕುಮಾರ್ ಸೇನ್ ಶ್ರೀರಾಮಕೃಷ್ಣರ ಜೀವನದ ಬಾಲ್ಯದ ಘಟನೆಗಳನ್ನು ಈ ಕೃತಿಯಲ್ಲಿ ಸವಿಸ್ತಾರವಾಗಿ ವಿವರಿಸಿದ್ದಾರೆ. ಪುಟ್ಟ ಗದಾಯ್ ಮತ್ತು ಶ್ರೀನಿವಾಸ ಶಾಂಖಾರಿ ಎಂಬ ಒಬ್ಬ ಭಕ್ತನ ಕುರಿತು ಅಲ್ಲಿ ಒಂದು ಪ್ರಸಂಗವಿದೆ. ಶಾಂಖಾರಿ ಎಂದರೆ ಬಳೆ ಮಾರುವ ಜಾತಿಯವರು. ಶ್ರೀನಿವಾಸನನ್ನು ಗ್ರಾಮದವರು ಚಿನು ಎಂದೇ ಕರೆಯುತ್ತಿದ್ದರು. ಹೀಗೆ ಈತ ಚಿನು ಶಾಂಖಾರಿಯಾದ. ಶ್ರೀರಾಮಕೃಷ್ಣರ ಜನ್ಮಸ್ಥಳವಾದ ಕಾಮಾರಪುಕುರಿನಲ್ಲಿ ಪ್ರಶಾಂತವಾದ ವಾತಾವರಣವಿತ್ತು. ಸರಳರಾದ ಜನರು ಕೃಷಿ, ಗೋವು ಸಾಕಣೆ, ಸಣ್ಣ ಕಸುಬುಗಳಿಂದ ಜೀವಿಸುತ್ತಿದ್ದರು. ಇತರ ಸಾಧಾರಣ ಹಳ್ಳಿಗಳಂತೆ ಇದ್ದ

ಕಾಮಾರಪುಕುರ ಶ್ರೀರಾಮಕೃಷ್ಣರನ್ನು ಪಡೆದು ಇಂದು ಅಯೋಧ್ಯಾ, ಗೋಕುಲ, ಮಥುರೆಗಳಂತೆ ಪವಿತ್ರ ತೀರ್ಥ ಕ್ಷೇತ್ರವಾಗಿದೆ.



ಬಾಲಕ ಗದಾಯ್ ಕಾಮಾರಪುಕುರದಲ್ಲಿ ಎಲ್ಲರ ಹೃದಯವನ್ನು ತನ್ನ ಮುಗ್ಧ ಸೌಂದರ್ಯದಿಂದ ಸೂರೆಗೊಂಡ. ಅವನು ಚಿಕ್ಕ ಮಗುವಿರುವಾಗಲೇ ಹಳ್ಳಿಯ ಹೆಂಗಸರು ಮನೆಯ ಕೆಲಸಗಳನ್ನು ಆದಷ್ಟು ಬೇಗ ಮುಗಿಸಿ ಗದಾಯ್‌ಯನ್ನು ಕಾಣಲು ಕ್ಷುದೀರಾಮನ ಮನೆಗೆ ಓಡಿ ಬರುತ್ತಿದ್ದರು. ಗದಾಯ್ ನಡೆಯಲು ತೊಡಗಿದಾಗ ಗೆಳೆಯರೊಂದಿಗೆ ಹಳ್ಳಿಯ ಎಲ್ಲ ಮನೆಗಳಿಗೆ ಯಾವುದೇ ಭೇದವಿಲ್ಲದೆ ಸಂಕೋಚವಿಲ್ಲದೆ ಹೋಗುತ್ತಿದ್ದ. ಹೆಂಗಸರು ತಿಂಡಿತಿನಿಸುಗಳನ್ನು ತಯಾರಿಸಿದಾಗ ಅವನಿಗಾಗಿ ಮೊದಲೇ ಒಂದು ಭಾಗವನ್ನು ಬೇರೆ ಇಟ್ಟು, ಗದಾಯ್ ಬಂದಾಗ ತಮ್ಮ ಕೈಗಳಿಂದ ಅವನಿಗೆ ತಿನ್ನಿಸುತ್ತಿದ್ದರು. ಹಳ್ಳಿಯ ಸಮವಯಸ್ಕರಾದ ಗೆಳೆಯರು ಗದಾಯ್ ಜೊತೆಗೂಡಿ ಭೋಜನದಲ್ಲಿ ಪಾಲುಗೊಳ್ಳುತ್ತಿದ್ದರು. ಗದಾಯ್ ಪುರಾಣದ ಕಥೆಗಳನ್ನು ಸುಂದರವಾಗಿ ವರ್ಣಿಸಿ, ಅದರಲ್ಲಿನ ಪಾತ್ರಗಳನ್ನು ಅಭಿನಯಿಸಿ ತೋರಿಸುತ್ತಿದ್ದ. ಅವನ ಕಂಠವು ಅಪೂರ್ವವಾದ ಮಾಧುರ್ಯದಿಂದ ಕೂಡಿತ್ತು. ಅವನ ಹಾಡುಗಳನ್ನು ಕೇಳಲು ಹಳ್ಳಿಯ ಜನರೆಲ್ಲಾ ಅವನ ಹತ್ತಿರ ಬರುತ್ತಿದ್ದರು. ಹಳ್ಳಿಯ ಸರಳ ಜನರು ತಮಗರಿವಿಲ್ಲದೆ ಅವನತ್ತ ಆಕರ್ಷಿತರಾಗಿದ್ದರು. ಭಕ್ತರೂ, ಧಾರ್ಮಿಕರೂ, ಆಧ್ಯಾತ್ಮಿಕ ಜೀವನವನ್ನು ನಡೆಸುತ್ತಿದ್ದ ಕೆಲವರು ಗದಾಯ್ ಸಾಕ್ಷಾತ್ ಭಗವಂತನೆಂದು ಅರ್ಥಮಾಡಿಕೊಂಡಿದ್ದರು. ಇವನ ಮಾತಾಪಿತರಿಗೆ ಆದ ದಿವ್ಯ ಅನುಭವಗಳನ್ನು ಕೇಳಿದ್ದ ಧನಿ, ಪ್ರಸನ್ನಮಯಿ ಮೊದಲಾದ ಸ್ತ್ರೀಯರು ಗದಾಯ್‌ನನ್ನು ಬಾಲಗೋಪಾಲನೆಂದೇ ತಿಳಿದು ಭಕ್ತಿ ಸ್ನೇಹ ಆದರಗಳಿಂದ ನೋಡುತ್ತಿದ್ದರು. ಸಾಕ್ಷಾತ್ ಭಗವಂತನೆಂದು ಅರಿತು ಗದಾಯ್‌ಯನ್ನು ಪೂಜಿಸಿದವರಲ್ಲಿ ಒಬ್ಬ ಶ್ರೀನಿವಾಸ ಶಾಂಖಾರಿ ಅಥವಾ ಚಿನು ಶಾಂಖಾರಿ. ಶ್ರೀನಿವಾಸ ಶಾಂಖಾರಿಯನ್ನು ಶ್ರೀಕೃಷ್ಣ ಪರಮಾತ್ಮನ ಅಣ್ಣ ಬಲರಾಮನ ಅವತಾರವೆಂದು ಹೊಗಳಿ, ಅವರ ಭಕ್ತಿಯು ವಿದುರನ ಭಕ್ತಿಯಂತಿದೆ ಎಂದೂ ಹೇಳಿದ್ದಾರೆ.

ಚಿನು ಶಾಂಖಾರಿಯು ವೃದ್ಧನೂ ಬಡವನೂ ಆಗಿದ್ದ. ಆದರೆ ಭಾಗವತ ಪಂಡಿತನಾಗಿದ್ದ. ಪುಟ್ಟ ಗದಾಯ್ ಮತ್ತು ಚಿನುವಿನ ಮಧ್ಯೆ ಅಜ್ಜ ಮೊಮ್ಮಗನ ವಯಸ್ಸಿನ ಅಂತರ. ಆದರೆ ಗದಾಯ್ ಅವನನ್ನು ಅಣ್ಣಾ ಎಂದು ಕರೆಯುತ್ತಿದ್ದ. ಗದಾಯ್ ಸಾಧಾರಣ ಬಾಲಕನಲ್ಲ, ಧರೆಗಿಳಿದು ಬಂದ ಸಾಕ್ಷಾತ್ ಭಗವಂತನೆಂದು ಭಕ್ತನಾದ ಚಿನು ಅರಿತಿದ್ದ. ಇವರಿಬ್ಬರ ಸಂಬಂಧವು ಅಪೂರ್ವವಾಗಿತ್ತು. ಹಳ್ಳಿಯ ಜನರೆಲ್ಲ ಇವರಿಬ್ಬರ ಸ್ನೇಹವನ್ನು ವಿಸ್ಮಯದಿಂದ ನೋಡುತ್ತಿದ್ದರು. ಗದಾಯ್ ಪ್ರತಿ ನಿತ್ಯವೂ ಚಿನುವಿನ ಮನೆಗೆ ಭೇಟಿ ನೀಡುತ್ತಿದ್ದ. ಚಿನುವಂತೂ ಗದಾಯ್‌ಗಾಗಿ ತನಗೆ ಸಾಧ್ಯವಾದಷ್ಟು ಸಿಹಿತಿಂಡಿಗಳನ್ನು ತರಿಸಿ ಇಡುತ್ತಿದ್ದ. ಗದಾಯ್ ಮನೆಗೆ ಬಂದರೆ ಅವನನ್ನು ಆಸನದಲ್ಲಿ ಕುಳ್ಳಿರಿಸಿ ತನ್ನ ಕೈಯಿಂದಲೇ ಸಿಹಿತಿಂಡಿಗಳನ್ನು ತಿನ್ನಿಸುತ್ತಿದ್ದ. ಪುಟ್ಟ ಗದಾಯ್ ತಿನ್ನುವುದನ್ನು ಪ್ರೇಮಭಕ್ತಿಯಿಂದ ನೋಡಿ ಆನಂದಿಸುತ್ತಿದ್ದ. ಗದಾಯ್ ಚಿನುವನ್ನು ಅತ್ಯಂತವಾಗಿ ಪ್ರೀತಿಸುತ್ತಿದ್ದ. ಚಿನುವಿಗಂತೂ ಗದಾಯ್‌ಯನ್ನು ನೋಡಿದರೆ ಬಾಹ್ಯ ಪರಿಜ್ಞಾನವೇ ಇರುತ್ತಿರಲಿಲ್ಲ. ಗದಾಯ್ ಜೊತೆಯಲ್ಲಿದ್ದಾಗ ಸ್ವಂತ ಕುಟುಂಬವನ್ನೂ, ಕೆಲಸವನ್ನೂ ಸಂಪೂರ್ಣವಾಗಿ ಮರೆಯುತ್ತಿದ್ದ. ಗದಾಯ್ 'ಅಣ್ಣಾ...' ಎಂದು ಕರೆದರೆ ಸಾಕು, ಚಿನುವಿಗೆ ರೋಮಾಂಚನ ಉಂಟಾಗುತ್ತಿತ್ತು.

ಚಿನು ವೃದ್ಧನಾದರೂ ದೃಢಕಾಯನಾಗಿದ್ದ. ಗದಾಯ್‌ನನ್ನು ತನ್ನ ಸೊಂಟದ ಮೇಲೆ ಕುಳ್ಳಿರಿಸಿ ಆನಂದನರ್ತನವನ್ನೇ ಮಾಡುತ್ತಿದ್ದ. ಭಕ್ತಿಯಿಂದ ಹುಚ್ಚನಾಗುತ್ತಿದ್ದ. ಇವರಿಬ್ಬರ ನಡುವೆ ಕೆಲವು ಸಲ ಶಾಸ್ತ್ರಗಳ ಚರ್ಚೆಯೂ ನಡೆಯುತ್ತಿತ್ತು. ಚರ್ಚೆ ಎಷ್ಟು ಜೋರಾಗಿ ನಡೆಯುತ್ತಿತ್ತು ಎಂದರೆ ವಾದದ ಕೊನೆಗೆ ಜಗಳವೇ ಶುರುವಾಗುತ್ತಿತ್ತು. ಕೊನೆಗೆ ಭಕ್ತ ಚಿನು ಸೋತು ಕೋಪಗೊಂಡು, "ಇನ್ನು ನಿನ್ನ ಹತ್ತಿರ ಮಾತಾಡುವುದಿಲ್ಲ, ಇಲ್ಲಿಗೆ ಮುಗಿಯಿತು ನಮ್ಮ ಸಂಬಂಧ" ಎಂದು ಹೇಳಿ ಗಂಭೀರವಾಗಿ ಹೊರಟೇಹೋಗುತ್ತಿದ್ದ. "ಸರಿ ನಾನೂ ನೋಡುತ್ತೇನೆ" ಎಂದು ಹೇಳಿ ಗದಾಯ್ ತನ್ನ ದಾರಿ ಹಿಡಿಯುತ್ತಿದ್ದ.

ಆದರೆ ಪ್ರೀತಿಯ ಬಂಧನವಿದ್ದಾಗ ಜಗಳ ಎಷ್ಟು ಹೊತ್ತು

ತಾನೇ ನಿಲ್ಲಬಲ್ಲುದು? ಇಬ್ಬರಿಗೂ ಎಷ್ಟು ಹೊತ್ತು ತಾನೆ ಅಗಲಿರಲು ಸಾಧ್ಯ? ಸ್ವಲ್ಪ ಹೊತ್ತಿನಲ್ಲೆ ಆಲಿಂಗನ ಮಾಡಿಕೊಂಡು ಒಂದಾಗಿಬಿಟ್ಟಾಗ, ಹಿಂದಿನಂತೆಯೇ ಸ್ನೇಹವಿರುತ್ತಿತ್ತು. ಹೀಗೆ ಧರೆಗಿಳಿದು ಬಂದ ಭಗವಂತನ ಬಾಲ್ಯದ ಆಟಗಳಲ್ಲಿ ಭಾಗ ವಹಿಸಿ ಚಿನು ಆನಂದದಿಂದ ಜೀವನವನ್ನು ಕಳೆಯುತ್ತಿದ್ದ.

ದಿನಗಳು ಉರುಳಿದವು. ಚಿನುವಿನ ಶರೀರವು ವಯಸ್ಸಿನಿಂದ ಜೀರ್ಣವಾಗತೊಡಗಿತು. ಇನ್ನು ಜಾಸ್ತಿ ದಿನ ಬದುಕಿರುವುದಿಲ್ಲ ಎಂದು ಅವನಿಗೆ ತಿಳಿದುಬಂತು. ಭಗವಂತನ ಲೀಲೆಯನ್ನು ಹೆಚ್ಚು ದಿನ ನೋಡಲಾಗುವುದಿಲ್ಲ, ಈ ಆನಂದವನ್ನು ಕಳೆದುಕೊಳ್ಳಲು ಅವನಿಗೆ ದುಃಖವಾಗುತ್ತಿತ್ತು. ಹಗಲೂ ರಾತ್ರಿ ಅವನಿಗೆ ಗದಾಯ್‌ದೇ ಚಿಂತೆ.

ಅದೊಂದು ದಿನ ಚಿನು ಭಕ್ತಿಯಿಂದ ಭಾವೋನ್ಮುಖನಾದ. ಗಿಡಗಳಿಂದ ಹೂವುಗಳನ್ನು ಕಿತ್ತು ಸುಂದರವಾದ ಮಾಲೆಯನ್ನು ಕಟ್ಟಿದ. ಅಂಗಡಿಯಿಂದ ಸಿಹಿ ತಿಂಡಿಗಳನ್ನು ತಂದ. ಗದಾಯ್ ಮನೆಗೆ ಬಂದಾಗ ಅವನ ಕೈ ಹಿಡಿದುಕೊಂಡು ಮಾಲೆಯನ್ನೂ, ಸಿಹಿತಿಂಡಿಗಳನ್ನೂ ತೆಗೆದುಕೊಂಡು ಊರಿನ ಹೊರಗೆ ನಡೆದ. ನಿರ್ಜನವಾದ ಸ್ಥಳವನ್ನು ನೋಡಿ ಒಂದು ಕಡೆ ಗದಾಯ್‌ಯನ್ನು ಒಂದು ಚಿಕ್ಕ ಪೀಠದ ಮೇಲೆ ಕುಳ್ಳಿರಿಸಿದ. ಯಾರಾದರೂ ನೋಡುತ್ತಿರುವರೇ ಎಂದು ಸುತ್ತಲೂ ಕಣ್ಣರಳಿಸಿ ನೋಡಿದ. ಯಾರೂ ಇಲ್ಲವೆಂದು ಖಚಿತವಾದ ಮೇಲೆ ಬಾಲಕನ ಮುಂದೆ ಭಕ್ತಿಯಿಂದ ಕುಳಿತ. ಈಗ ಬಾಲಕನನ್ನು ಪೂಜಿಸತೊಡಗಿದ. ಹೂವಿನ ಮಾಲೆಯನ್ನು ಕೊರಳಿಗೆ ತೊಡಿಸಿದ. ಸಿಹಿತಿಂಡಿಯನ್ನು ತನ್ನ ಸ್ವಂತ ಕೈಯಿಂದಲೇ ತಿನ್ನಿಸಲು ತೊಡಗಿದ. ಚಿನು ಭಕ್ತಿಯಿಂದ ಮೈಮರೆತ. ಕಣ್ಣಿನಿಂದ ಅಶ್ರು ಧಾರಾಕಾರವಾಗಿ ಸುರಿಯುತ್ತಿದೆ. ಮೇಘಗಳಿಂದ ಸೂರ್ಯನು ಮುಚ್ಚಿಕೊಂಡಂತೆ ಅಶ್ರುವಿನಿಂದ ಕಣ್ಣು ಮಂದವಾಗಿದೆ. ಪುಟ್ಟ ಗದಾಯ್ ಏನೂ ಅರಿಯದವನಂತೆ ಕಣ್ಣರಳಿಸಿ ನೋಡುತ್ತಿದ್ದಾನೆ. ಚಿನು ಭಾವಸ್ಥನಾಗಿ ಸಿಹಿತಿಂಡಿಯನ್ನು ಗದಾಯ್‌ಯ ಬಾಯಿಗೆ ಇಡಲು ಪ್ರಯತ್ನಿಸಿದಾಗ ಅವನ ಕೈ ನಡುಗುತ್ತ ಎಲ್ಲೆಲ್ಲೊ ಹೋಗುತ್ತಿದೆ —ಒಂದು ಸಲ ಕಣ್ಣಿನ ಹತ್ತಿರ, ಒಂದು ಸಲ ಕಿವಿಯ ಹತ್ತಿರ, ಪುಟ್ಟ ಗದಾಯ್ ಮುಗುಳುನಗೆಯಿಂದ ತಾನೇ ಚಿನುವಿನ ಕೈಹಿಡಿದುಕೊಂಡು ತನ್ನ ಬಾಯಿಗೆ ಸಿಹಿತಿಂಡಿಯನ್ನು ಹಾಕಿಸಿಕೊಂಡು ತಿಂದ.

ಚಿನು ಈಗ ಶಿಶು ಗದಾಯ್‌ಯ ಮುಂದೆ ಕೈಜೋಡಿಸಿ ಗದ್ಗದ ಕಂಠದಿಂದ ತೊದಲಿದ, "ಹೇ ಪ್ರಭು! ನನಗೆ ವಯಸ್ಸಾಗುತ್ತಿದೆ. ಮರಣವು ಸಮೀಪಿಸುತ್ತಿದೆ. ಈ ಧರೆಯಲ್ಲಿ ಮುಂದೆ ನೀನು ಏನೇನು ಲೀಲೆಗಳನ್ನು ತೋರಿಸಲಿರುವೆಯೋ ಅದನ್ನು ನೋಡುವ ಭಾಗ್ಯ ನನಗೆ ಇರುವುದಿಲ್ಲ. ಹೇ ಪ್ರಭು! ಈ ದಾಸನ ಮೇಲೆ ಕೃಪೆ ತೋರಿ ಉದ್ಧರಿಸು, ಜನ್ಮ ಸಫಲಗೊಳಿಸು." ಹೀಗೆಂದು ಪ್ರಾರ್ಥಿಸುತ್ತ ಶಿಶುವಿನ ರೂಪದಲ್ಲಿರುವ ಆ ಸಾಕ್ಷಾತ್ ಭಗವಂತನಲ್ಲಿ ಚಿನು ಶರಣಾಗತನಾದ.

ಅಕ್ಷಯಕುಮಾರ್ ಸೇನ್, ಚಿನು ಮತ್ತು ಗದಾಯ್‌ರ ಸಂಬಂಧದ ಬಗ್ಗೆ ಈ ರೀತಿ ವಿವರಿಸಿ, ಚಿನು ನಿಜವಾಗಿಯೂ ಧನ್ಯ, ಅವನು ಮುಕ್ತನಾದ ಎಂದು ಹೇಳಿ ಈ ಭಾಗವನ್ನು ಇಲ್ಲಿಗೆ ಮುಗಿಸಿದ್ದಾರೆ. ಮುಂದೆ ಶ್ರೀರಾಮಕೃಷ್ಣರ ಜೀವನದಲ್ಲಿ ಅದೆಷ್ಟು ಜನ ಪಂಡಿತರು, ಸಾಧಕರು, ಭಕ್ತರು ಅವರನ್ನು ಸಮೀಪಿಸಿ ಅವರು ಸಾಕ್ಷಾತ್ ಭಗವಂತನೆಂದು ತಿಳಿದು ಪೂಜಿಸಿದರು! ಭೈರವಿ ಬ್ರಾಹ್ಮಣಿಯು ಪಂಡಿತರ ಸಭೆಯನ್ನು ಸೇರಿಸಿ ಶಾಸ್ತ್ರಗಳ ಆಧಾರದಿಂದ ಶ್ರೀರಾಮಕೃಷ್ಣರಲ್ಲಿರುವ ಅವತಾರದ ಗುಣಗಳನ್ನು ಸಿದ್ಧಪಡಿಸಿ ತೋರಿಸಿದಳು. ಗಿರೀಶ್‌ಚಂದ್ರ ಘೋಷ್ ತಮ್ಮ ಜೀವನವನ್ನು ಅತಿ ಕೆಟ್ಟ ರೀತಿಯಲ್ಲಿ ಕಳೆದಿದ್ದರೂ ಶ್ರೀರಾಮಕೃಷ್ಣರ ಅಪಾರ ಕೃಪೆಯಿಂದ ಅವರಲ್ಲಿ ಪ್ರೀತಿ ಮೂಡಿ ಅವರೇ ಸಾಕ್ಷಾತ್ ಭಗವಂತನೆಂದು ಅರಿತು ಪುಷ್ಪ, ಗಂಧ, ಮಾಲೆಗಳಿಂದ ಅವರನ್ನು ಪೂಜಿಸಿದರು. ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ ಅವರನ್ನು ಅವತಾರ ಪುರುಷರೆಂದು ವಿವೇಕಾನಂದರು ಸ್ತುತಿಸಿ, ತನ್ಮೂಲಕ ಪ್ರಪಂಚಕ್ಕೆಲ್ಲ ಈ ವಿಷಯ ತಿಳಿಯಿತು. ಈಗ ಮನೆಮನೆಗಳಲ್ಲಿ, ಮಂದಿರಗಳಲ್ಲಿ ಅವರ ಭಾವಚಿತ್ರ, ವಿಗ್ರಹಗಳನ್ನು ಇರಿಸಿ ಸಹಸ್ರ ಸಹಸ್ರ ಜನರು ಪೂಜಿಸುತ್ತಿದ್ದಾರೆ. ಇದೆಲ್ಲದಕ್ಕಿಂತ ಮೊದಲೇ ಕಾಮಾರ್‌ಪುಕುರದ ಹಳ್ಳಿಯ ಜನ ಅರಿತೋ, ಅರಿಯದೆಯೋ ಗದಾಯ್‌ಯನ್ನು ಪ್ರೀತಿಸಿದರು, ಆದರಿಸಿದರು, ಪೂಜಿಸಿದರು. ಶ್ರೀರಾಮಕೃಷ್ಣರು ಧಾರ್ಮಿಕರಾದ ಮುಗ್ಧ ಹಳ್ಳಿಗರನ್ನು ತಮ್ಮ ಪ್ರೀತಿ ನಲ್ಮೆಗಳಿಂದ ಅನುಗ್ರಹಿಸಿದ್ದರು. ಇಂಥ ಮುಗ್ಧ ಹಳ್ಳಿಗರ ಶ್ರದ್ಧೆಯ ಸಾಕಾರ ಮೂರ್ತಿಯಾದ ಚಿನು, ಯಾವ ಬಾಹ್ಯ ಪ್ರಮಾಣಗಳೂ ಇಲ್ಲದಂಥ ಕಾಲದಲ್ಲಿ, ತನ್ನ ಅಂತರ್ದೃಷ್ಟಿಯಿಂದಲೇ ಆ ಮಹಾಸತ್ಯವನ್ನು ಅರ್ಥೈಸಿಕೊಂಡಿದ್ದನೆಂಬುದು ಭಾರತೀಯ ಜನಪದದ ಅಂತಃಸತ್ವಕ್ಕೆ ಹಿಡಿದ ಕನ್ನಡಿಯಾಗಿದೆ.

### ಪ್ರಥಮ ಅನುರಾಗ

ಓ, ನನಗೆ ಏನೇನು ಅವಸ್ಥೆಗಳು ಬಂದಿದ್ದವು. ಕಾಮಾರಪುಕುರದಲ್ಲಿ ಚಿನು ಶಾಂಖಾರಿಯೇ ಮೊದಲಾದ ನನ್ನ ಬಾಲ್ಯ ಸ್ನೇಹಿತರಿಗೆ ಹೇಳಿದೆ, 'ನಿಮ್ಮ ಕಾಲಿಗೆ ಬೀಳುತ್ತೇನೆ. ಒಮ್ಮೆಯಾದರೂ ಹರಿ ಎಂಬುದಾಗಿ ನಿಮ್ಮ ಬಾಯಿಂದ ಹೇಳಿ! ಅವರ ಕಾಲಿಗೆಲ್ಲ ಇನ್ನೇನು ಬೀಳುವುದರಲ್ಲಿದ್ದೆ. ಆಗ ಚಿನು ಶಾಂಖಾರಿ ಹೇಳಿದ: 'ಇದು ನಿನ್ನ ಪ್ರಥಮ ಅನುರಾಗ; ಆದ್ದರಿಂದ ಎಲ್ಲರೂ ನಿನಗೆ ಒಂದೇ ಸಮನಾಗಿ ತೋರುತ್ತಿದ್ದಾರೆ'

(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪುಟ ೬೦೨)